ಬಾ.ರಂ. ಸುರೇಶ್, ತುಮಕೂರು
ಹೆಣ್ಣು ಸಂಸಾರದ ಕಣ್ಣು. ಗಂಡು?



ಪವರ್ ಇರುವ ಕನ್ನಡಕ.

ಪಿ. ಗೋವಿಂದರಾಜ್, ಶಿವಮೊಗ್ಗ
ಹೆಂಡತಿ ಮೊದಲು 'ರೀ', ಆನಂತರ 'ಹಬ' ಎಂದು ಈಗ 'ಬಾಬಿ' ಎನ್ನುವಳು. ಮುಂದೆ?
ಶಿಳ್ಳೆ ಹೊಡೆದು ಹುಬ್ಬಿನಲ್ಲೇ ಹಬ್ಬಿಯೊಡನೆ ಸಂವಾದ.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ
ಒಬ್ಬರ ಗುಣಗಳನ್ನು ಪ್ರಶಂಸಿಸುವುದು ಮುಖ್ಯವೋ, ತೆಗಳುವುದು ಮುಖ್ಯವೋ?
ಎಲ್ಲರೆದುರು ಹೊಗಳುವುದು, ಏಕಾಂತದಲ್ಲಿ ದೋಷಗಳನ್ನು ತೆಗಳುವುದು ಬೆಳವಣಿಗೆಗೆ ಸೂಕ್ತ ಕ್ರಮ.

ಕೆ.ಎಂ. ಕೊಟ್ರಸ್ವಾಮಿ, ಸಂಡೂರು
ಪ್ರಪಂಚದಲ್ಲಿ ಅತಿ ಸುಂದರವಾದ ವಸ್ತು ಯಾವುದು?



ಯೌವನ.

ಮಹಾವೀರ ಕಾಸರ, ಶಿವಮೊಗ್ಗ
ಕೋಗಿಲೆಗೆ ಇರುವ ಮಹತ್ವ ಕಾಗೆಗೆ ಏಕಿಲ್ಲ?
ಏಕೆಂದರೆ ಕಾಗೆಗೆ ಮನುಷ್ಯರನ್ನು ಆಕರ್ಷಿಸುವ ಟ್ಯೂನ್, ಟೋನ್ ಸಿಕ್ಕಿಲ್ಲ.

ಕೆ. ಶ್ರೀನಿವಾಸ ರಾವ್, ಬೆಂಗಳೂರು
ಆರತಿಗೂ, ಮಂಗಳಾರತಿಗೂ ಏನು ವ್ಯತ್ಯಾಸ?
'ಹಸೆಮಣೆಯಲ್ಲಿ ಆರತಿ; ಆನಂತರ ಜೀವನವಿಡೀ ಆಗಾಗ್ಗೆ ಮಂಗಳಾರತಿ' ಎಂದನಾ ಪತಿ.

ಬಿ. ಬಸವರಾಜ್, ಹರಿಹರ
ಗಂಡ ಸತ್ತಮೇಲೆ ಹೆಂಡತಿಗೆ ಬುದ್ಧಿ ಬಂತು ಎನ್ನುತ್ತಾರೆ. ಗಂಡನಿಗೆ?
ಬುದ್ಧಿ ಬರಲು ಸಾಧ್ಯವಿಲ್ಲ. ಸತ್ತುಹೋಗಿರುತ್ತಾನಲ್ಲ!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಎಲ್ಲರನ್ನು ದಡದಿಂದ ದಡಕ್ಕೆ ಸೇರಿಸುವ ಹಡಗು ಒಂಟಿಯೇ. ಈ ವಾಕ್ಯ ಯಾರಿಗೆ ಹೊಂದುತ್ತೆ?
ಮೇಷ್ಟ್ರಿಗೆ.

ಬಿ. ಚಂದ್ರೇಗೌಡ, ಬೆಂಗಳೂರು
ಕಟುಸತ್ಯ ಇರುವಂತೆ ಕಟುಸುಳ್ಳು ಇಲ್ಲವೆ?
ಇದೆಯಲ್ಲ! ವಾಹಿನಿಯಲ್ಲಿ ಮಾತನಾಡಿ, ನಂತರ 'ನನ್ನ ಮಾತನ್ನು ತಿರುಚಲಾಗಿದೆ' ಎನ್ನುವುದು ಕಟುಸುಳ್ಳೇ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಯಮಲೋಕಕ್ಕೆ ಹೋಗುವವನಿಗೆ ಟೋಲ್‌ಗೇಟ್ ಯಾವುದು?
ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ. ಅಲ್ಲಿ ಫೀಸ್ ಕಟ್ಟಿಯೇ ಮುಂದಿನ ಪಯಣ.

ಮುರಲೀಧರ ಕುಲಕರ್ಣಿ, ಬೀದರ್
ದಾನಕ್ಕೆ ಪ್ರತಿಯಾಗಿ ಏನನ್ನೂ ಪಡೆಯಬಾರದು. ಆದರೆ ಮತದಾನಕ್ಕಾಗಿ ಜನ ಹಣ ಪಡೆಯುವರಲ್ಲ?
ಅವರು ಹಣಕ್ಕಾಗಿಯೇ ಇರುವ ಮತವೇಶ್ಯೆಯರು.

ಪಿ.ಎಸ್. ಶ್ರೀವತ್ಸ, ಬೆಂಗಳೂರು
ಒತ್ತುವರಿ; ಇದರ ನಿಜವಾದ ಅರ್ಥ?
ಒತ್ತುವವರಿಗೆ ಭರ್ಜರಿ; ಒತ್ತಿಸಿಕೊಂಡವರಿಗೆ ಸರ್ಜರಿ.

ದಿನೇಶ್, ಗುಡ್ಡದೂರು
ರಾಜಕಾರಣಿಗಳ ಮಕ್ಕಳೇ ರಾಜಕಾರಣಿಗಳಾಗಲು ಕಾರಣವೇನು?
ವಂಶಪ್ರಭುತ್ವಕ್ಕೆ ಜೈ ಎನ್ನುವ ಶುದ್ಧಶುಂಠಿ ಮತದಾರರು.

ಅನಸೂಯ ವಿಕ್ರಂ, ಕೇದಿಗೆಮನೆ
ಬೆಕ್ಕೇ ಬೆಕ್ಕೇ ಮುದ್ದಿನ ಸೊಕ್ಕೇ; ನಾಯೇ ನಾಯೇ...?
ಕಹಳೆಯ ಬಾಯೇ...

## ಬಹುಮಾನಿತ ಪ್ರಶ್ನೆ

ಮಲ್ಲಿಕಾರ್ಜುನ ಬಿರಾದಾರ್, ಕಲಬುರಗಿ
ವಯಸ್ಸಾಯ್ತು, ಮದುವೆಯಾಗಿ ಎನ್ನುತ್ತಾರೆ ಅಪ್ಪ ರು. ವಯಸ್ಸಷ್ಟೇ ಸಾಕೇ?
'ವೈಸ್' ಆದರೆ ಒಳಿತು. ಆದರೆ ಗಂಡು ಹೆಣ್ಣೆನೆದುರು ಪೆದ್ದೇ ಆಗುವುದರಿಂದ ವಯಸ್ಸನ್ನಷ್ಟೇ ಪರಿಗಣಿಸುವರು.

ಆಶಾ ಅಪ್ರಮೇಯ, ದಾವಣಗೆರೆ
ಭಕ್ತನಿತ್ತ ಕಾಣಿಕೆಗಾಗಿ ಇಡಗುಂಜಿ ಗಣಪನೆದುರೇ ಕಿತ್ತಾಡಿದ ಅರ್ಚಕರನ್ನು ದೇವನು ತಡೆಯಲಿಲ್ಲವೇಕೆ?
ತಾನಿರುವಲ್ಲೇ ಎಂಟರ್‌ಟೈನ್‌ಮೆಂಟ್ ಸಿಕ್ಕಾಗ ಬಿಡುವಷ್ಟು ಹೆಡ್ಡನಲ್ಲ ಗಣಪ.

ಅಮರಯ್ಯಾ ಪತ್ರಿಮಠ, ಸುರಪುರ
ಸತ್ಯಕ್ಕೆ ಸೋಲಿನ ನಂತರವೇ ಗೆಲುವೇಕೆ?
ಸತ್ಯ ಎಲ್ಲೋ ನೋಡುತ್ತಿರುವಾಗ ಸುಳ್ಳು ಅದನ್ನು ಹೊಡೆದುರುಳಿಸತ್ತೆ. ನಂತರವೇ ಕಾದಾಟ, ಜಯ.

ಎಂ.ಎ. ಕುಮಾರ್, ಬೆಂಗಳೂರು
ಮದುವೆಯಾದ ನಂತರ ಮಧುಚಂದ್ರ. ಮಕ್ಕಳಾದ ತರುವಾಯ?



ಏಕಾಂತಕ್ಕೇ ಅರ್ಧಚಂದ್ರ.

ವಿ. ಮಾಧವ ಶ್ಯಾನುಭಾಗ, ಕುಂದಾಪುರ
ಪತಿವ್ರತೆಯರಲ್ಲಿ ಮಂಡೋದರಿಯ ಹೊರತು ನಾಲ್ವರೂ ಪರಪುರುಷರ ದೌರ್ಜನ್ಯಕ್ಕೊಳಗಾದರೂ ಆ ಪಟ್ಟ ದೊರೆತದ್ದು ಹೇಗೆ?
ಪರಪುರುಷರಿಂದ ಮೋಸ/ದೌರ್ಜನ್ಯಕ್ಕೊಳಗಾದರೂ ಪತಿನಿಷ್ಠೆಗೆ ಕುಂದಿರಲಿಲ್ಲವಾದ್ದರಿಂದ.

ರತ್ನಜ, ಮೈಸೂರು
ಇಲ್ಲೊಬ್ಬರು 'ಬೇಕು ಬೇಕು ಎನ್ನುವುದಕ್ಕೆ ಹಾಕಿ ಬ್ರೇಕು' ಎನ್ನುತ್ತಿದ್ದಾರಲ್ಲ?
'ಸಾಕು ಸಾಕು ಎನ್ನುತ್ತೇನೆ. ನೀವೇ ನನ್ನ ಬೇಕುಗಳನ್ನು ನೋಡಿಕೊಂಡು ಸಾಕಿ' ಎನ್ನಿ.

■ ರಾಮ್